(ಇಂದು ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ನಂಬರ 13 ಪರ ಶ್ರೀ. ಎಮ ಎಸ ಎಸ ವಕೀಲರಿಂದ :**

1. ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ ಆಗಿದೆ ಎಂದು ತೋರಿಸಲು ನ್ಯಾಯಾಲಯ ಡಿಕ್ರಿ ಅಥವಾ ನೊಂದಾಯಿತ ವಿಭಾಗ ಪತ್ರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೌಖಿಕ ವಿಭಾಗ ಆಗಿದೆ ಎಂದು ಹೇಳುತ್ತಾರೆ. ನನ್ನ ಅಜ್ಜನ ಜೀವಿತ ಕಾಲದಲ್ಲಿ ಅಥವಾ ಅವರ ಮರಣದ ನಂತರ ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ ಆಗಿದೆ ಎಂದು ತೋರಿಸಲು ನ್ಯಾಯಾಲಯ ಡಿಕ್ರಿ ಅಥವಾ ನೊಂದಾಯಿತ ವಿಭಾಗ ಪತ್ರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಜಂಟಿ ಕುಟುಂಬಗಳಲ್ಲಿ ವಿದ್ಯಾವಂತ, ಅವಿದ್ಯಾಂತ ಮತ್ತು ಸೋಮಾರಿ ಹಾಗೂ ದುಡಿಯುವ ಸದಸ್ಯರು ಇರುತ್ತಾರೆ ಎಂದರೆ ಸರಿ. ಕುಟುಂಬದಲ್ಲಿ ಕೆಲಸ ಮಾಡದೆ ದುಡಿಯದೆ ಇದ್ದರು ಸಹ ಅವರನ್ನು ಜಂಟಿ ಕುಟುಂಬದಿಂದ ಹೊರಹಾಕಲು ಬರುವುದಿಲ್ಲ ಎಂದರೆ ಸಾಕ್ಷಿ ಅದು ತಪ್ಪು ಇದೆ ಎಂದು ಹೇಳುತ್ತಾರೆ. ಜಂಟಿ ಕುಟುಂಬದ ನಾತೆ ಆಧಾರದ ಮೇಲೆ ದಾನ ಪತ್ರದ ಮೂಲಕ ಬಂದ ಆಸ್ತಿಯನ್ನು ಹೊರತುಪಡಿಸಿ ಖರೀದಿ ಮಾಡಿರುವ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಆಗುತ್ತವೆ ಎಂದರೆ ಸರಿಯಲ್ಲ. ಸರ್ವೆ ನಂಬರ 98 ರ ಜಮೀನು ಯಾವ ವರ್ಷದಲ್ಲಿ ನೊಂದಣಿ ಆಗಿದೆ ಎಂದರೆ ಸಾಕ್ಷಿ 1995 ರಲ್ಲಿ ಆಗಿರಬಹುದು ಎಂದು ಹೇಳುತ್ತಾರೆ. ನನ್ನ ಅಜ್ಜ ಗುಂಡಪ್ಪ 2003 ರಲ್ಲಿ ತೀರಿಕೊಂಡರು. ನನ್ನ ಅಜ್ಜ ಗುಂಡಪ್ಪ ಬದುಕಿದ್ದಾಗಲೆ ಸರ್ವೆ ನಂಬರ 98 ರ ಜಮೀನಿಗೆ ಸಂಬಂಧ ಪಟ್ಟಂತೆ ಒಂದೇ ದಿನ 3 ಖರೀದಿ ಪತ್ರ ಆಗಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವೆರದು ಪ್ರತ್ಯಕವಾಗಿ ಆಗಿವೆ ಎಂದು ಹೇಳುತ್ತಾರೆ. ಸರ್ವೆ ನಂಬರ 98 ರ 3 ಎಕರೆ 14 ಗುಂಟೆ ಚಂದ್ರಶೇಖರವರ ಹೆಸರಿಗೆ, 3 ಎಕರೆ 14 ಗುಂಟೆ ನಾರಾಯಣರವರ ಹೆಸರಿಗೆ, 3 ಎಕರೆ

13 ಗುಂಟೆ ಅಮರನಾಥರವರ ಹೆಸರಿಗೆ ಖರೀದಿ ಪತ್ರ ಆಗಿದೆ ಎಂದರೆ ಸಾಕ್ಷಿ ಖರೀದಿ ಪತ್ರ ಆಗಿದೆ ಆದರೆ ನಮ್ಮ ಸ್ವಂತ ಆದಾಯದಿಂದ ಆಗಿದೆ ಎಂದು ಹೇಳುತ್ತಾರೆ. ನಮ್ಮ ಸ್ವಂತ ಆದಾಯದಿಂದ ಆಗಿದೆ ಎಂದು ಆ ಖರೀದಿ ಪತ್ರಗಳಲ್ಲಿ ಬರೆದಿರುವುದಿಲ್ಲ. ಗುಂಡಪ್ಪರವರ ಕುಟುಂಬದಲ್ಲಿ ನನ್ನ ತಂದೆ ಹಿರಿಯ ಮತ್ತು ವಿದ್ಯಾಂತ ಎಂದರೆ ಸರಿಯಲ್ಲ. ಗುಂಡಪ್ಪರವರು ನನ್ನ ತಂದೆಯನ್ನು ಬಹಳ ಪ್ರೀತಿಸುತ್ತಿದ್ದರು ಎಂದರೆ ಸರಿಯಲ್ಲ. ಗುಂಡಪ್ಪರವರ ಜೀವಿತವಿದ್ದಾಗ ಕುಟುಂಬದ ಇತರೆ ಸದಸ್ಯರಿಗಿಂತ ನನ್ನ ತಂದೆಯನ್ನು ಬಹಳ ಪ್ರೀತಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಿರಿಯ ಮತ್ತು ವಿದ್ಯಾಂತರಾಗಿ ಸರಕಾರಿ ನೌಕರರಾಗಿದ್ದರು ಎಂದರೆ ಸಾಕ್ಷಿ ಅವರು ಸರಕಾರಿ ನೌಕರಿಯಲ್ಲಿ ಇದ್ದರು ಎಂದು ಹೇಳುತ್ತಾರೆ. ನನ್ನ ಅಜ್ಜ ನನ್ನ ತಂದೆ ಮೇಲೆ ಹೆಚ್ಚಿನ ವಿಶ್ವಾಸ ಇದದ್ದನ್ನು ದುರುಪಯೋ ಪಡಿಸಿಕೊಂಡು ಸರ್ವೆ ನಂಬ ರ 127,186,12/2,98,228,119,202 ಈ ಜಮೀನುಗಳನ್ನು ನನ್ನ ತಂದೆ ತನ್ನ ಹೆಸರಿಗೆ ಮಾಡಿಕೊಂಡರು ಎಂದರೆ ಸರಿಯಲ್ಲ. ಸರಕಾರದಿಂದ ಸೌಲಭ್ಯ ಪಡೆಯಲು ನನ್ನ ತಂದೆ ಗ್ರಾಮ ಲೆಕ್ಕಾಧಿಕಾರಿ ಆಗಿದ್ದರಿಂದ ತನ್ನ ಹೆಸರಿಗೆ ಸದರಿ ಜಮೀನುಗಳನ್ನು ಇತರ ಸದಸ್ಯರಿಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಗಡಿ ಗುರುತುಗಳನ್ನು ಹಾಕಿಕೊಂಡು ಇವತ್ತಿನವರೆಗೊ ಪಾಲು ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಮೌಖಿಕ ವಿಭಾಗ ಆಗಿ ಗಡಿಗುರುತುಗಳು ಹಾಕಿಕೊಂಡಿರುತ್ತೇವೆ ಆದರೆ ದಾಖಲೆಗಳು ಇಲ್ಲ ಎಂದು ಹೇಳುತ್ತಾರೆ. ಎಲ್ಲಾ ದಾವಾ ಸ್ವತ್ತುಗಳು ಇವತ್ತಿನವರೆಗು ಜಂಟಿ ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿರುವ ಎಲ್ಲಾ ಪಕ್ಷಗಾರರು ಜಂಟಿ ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ.

2. ನನ್ನ ತಂದೆ ಜಂಟಿ ಕುಟುಂಬದ ಆದಾಯದಿಂದ ಬಂದ ಆಸ್ತಿಗಳನ್ನು ಅಂದರೆ ಹೆಚ್ಚಿನ ಆಸ್ತಿಗಳನ್ನು ಇತರೆ ಸದಸ್ಯರಿಗೆ ಗೊತ್ತಿಲ್ಲದಂತೆ ನನ್ನ ಹೆಸರಿಗೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಂದೆ ಹಾಗೂ ಅವರ ಸಹೋದರ ಸಹೋದರಿಯರಿಗೆ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಪ್ರತಿವಾದಿ 13 ಪರ ವಕೀಲರು ಅಳವಡಿಸಿಕೊಳ್ಳುತ್ತಾರೆ. )**

**ಮರುವಿಚಾರಣೆ ಇರುವುದಿಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.